

# ಕನ್ನಡವು ಕನ್ನಡವ ಕನ್ನಡಿಸುತಿರಲಿ...

ಕನ್ನಡವನ್ನು ಬದುಕಿನ ಒಳಹರಿವು, ಅರಿವನ್ನಾಗಿ ಮಾಡಿಕೊಂಡವರು ಎಲ್ಲಡೆ ಕಾಣಸಿಗುತ್ತಾರೆ. ಅದು ಕೇವಲ ಸಾಹಿತಿಗಳಿಗೆ, ನುಡಿ ಚಿಂತಕರಿಗೆ ಸೀಮಿತವಾಗಿಲ್ಲ. ಎಲ್ಲೆಡೆ ಕಾಣುವ ಹಲವು ಕನ್ನಡಗಳು, ಭಾಷೆಯ ವಿರಾಟ್ ಸ್ವರೂಪದ ಬಗೆಗಿನ ಅನನ್ಯನೋಟ ಇಲ್ಲಿದೆ

ನಮ್ಮಲ್ಲಿ ಕಾವೇರಿ ನದಿ ನೀರಿನ ಹಂಚಿಕೆ ವಿಷಯದಲ್ಲಿ ವಿವಾದಗಳು ತೊಡಗಿದಾಗ ಅಥವಾ ಬೆಳಗಾವಿಯಲ್ಲೊ, ಬೆಂಗಳೂರಿನಲ್ಲೊ ಮರಾಠಿ ಭಾಷಿಕರ, ತಮಿಳರ ಜೊತೆ ಗಡಿ ಅಥವಾ ಭಾಷೆಗೆ ಸಂಬಂಧಿಸಿದಂತೆ ಏನಾದರೂ ತಕರಾರು ಎದ್ದಾಗ ಬಂದ್, ಮುಷ್ಕರ, ಗಲಾಟೆ ಎಲ್ಲ ಆಗುತ್ತಲ್ಲ, ಅದು ಇಡೀ ಕರ್ನಾಟಕದ ತುಂಬ ಏಕಪ್ರಕಾರ ಆಗುವುದಿಲ್ಲ. ಉದಾಹರಣೆಗೆ ಇಂಥ ಯಾವತ್ತೂ ಸಂದರ್ಭಗಳನ್ನು ಬಿಡಿ, ಪಕ್ಕದ ಕಾಸರಗೋಡು ಕರ್ನಾಟಕಕ್ಕೇ ಸೇರಬೇಕು ಎಂಬ ಬಗ್ಗೆ ನಡೆಯುವ ಗದ್ದಲದಲ್ಲಿ ಕೂಡಾ ನಾನು ವಾಸವಾಗಿರುವ ಕರಾವಳಿಯ ಜಿಲ್ಲೆಗಳು ಭಾಗವಹಿಸಿದ್ದು ಅಷ್ಟಕ್ಕಷ್ಟೇ. ನಮ್ಮಲ್ಲಿ ಹೆಚ್ಚಿನವರು ಮನೆಯಲ್ಲಿ, ಸಂತೆಯಲ್ಲಿ ಎಲ್ಲ ಕಡೆ ಕನ್ನಡವೂ ಸೇರಿದಂತೆ ತುಳು, ಕೊಂಕಣಿ, ಬ್ಯಾರಿ, ಉರ್ದು, ಮಲಯಾಳಂ, ಇಂಗ್ಲೀಷ್ ಮಾತನಾಡುತ್ತೇವೆ. ಮೆಡಿಕಲ್ ಇತ್ಯಾದಿ ಕಲಿಯಲು ಬಂದ ವಿದ್ಯಾರ್ಥಿಗಳಿಂದಾಗಿ ಹಿಂದಿ